ಈ) ವಿಶ್ವಬ್ಯಾಂಕ್ ಅನುಮೋದಿಸಿರುವ 4 ಜಲಾನಯನಗಳನ್ನು 1991-92ರಿಂದ ಅನುಷ್ಠಾನಗೊಳಿಸಲಾಗುವುದು.

ಜಲಬಳಕೆಯ ರಾಷ್ಟ್ರೀಯ ಸಂಸ್ಥೆಯ ಕಾರ್ಯಾರಂಭ

1447 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್) : ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಬಳಕೆಗೆ ನೀರನ್ನು ಸಮರ್ಪಕವಾಗಿ ಬಳಸುವುದರ ಜೊತೆಗೆ ಒಣಭೂಮಿ ಬೇಸಾಯ ಅಭಿವೃದ್ಧಿ ಅಂಗವಾಗಿ ವಿಶ್ವಬ್ಯಾಂಕಿನ ಧನಸಹಾಯದೊಂದಿಗೆ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಜಲಬಳಕೆ ನಿರ್ವಹಣೆ ರಾಷ್ಟ್ರೀಯ ಸಂಸ್ಥೆಯೊಂದು ಬರುವು ಶೈಕ್ಷಣಿಕ ವರ್ಷದಿಂದ ಬೆಂಗಳೂರು ನಗರದಲ್ಲಿ ಕಾರ್ಯಾರಂಭ ಮಾಡಲಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಈ ಸಂಸ್ಥೆಯ ಅಂಗವಾಗಿ ವಿಶ್ವ ಬ್ಯಾಂಕಿನ ನಿಯೋಗವು ರಾಜ್ಯಕ್ಕೆ ಭೇಟಿ ನೀಡಿದೆಯೇ? ಹಾಗಿಲ್ಲದಿದ್ದಲ್ಲಿ, ಯಾವಾಗ ಭೇಟಿ ನೀಡುವುದು?

ಇ) ಇದುವರೆವಿಗೂ ಈ ರಾಷ್ಟ್ರೀಯ ಸಂಸ್ಥೆಯ ಪ್ರಾರಂಭಕ್ಕಾಗಿ ವಿಶ್ವಬ್ಯಾಂಕಿನಿಂದ ಹಣವನ್ನೇನಾದರೂ ಪಡೆಯಲಾಗಿದೆಯೇ?

ಈ) ಈ ಸಂಸ್ಥೆಯ ಆರಂಭಕ್ಕಾಗಿ ವಿಶ್ವಬ್ಯಾಂಕ್ ನೀಡಲಿರುವ ಧನಸಹಾಯವೆಷ್ಟು?

ಉ) ಈ ಸಂಸ್ಥೆಯ ಕಾರ್ಯಾರಂಭದ ನಂತರ ಹಿಂದುಳಿದ ಪ್ರದೇಶವಾದ ಬೀದರ್ ಜಿಲ್ಲೆಗೆ ಇದರಿಂದ ಯಾವ ರೀತಿಯಲ್ಲಿ ಅನುಕೂಲವಾಗಲಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ಹೌದು

ಆ) ವಿಶ್ವಬ್ಯಾಂಕಿನ ನಿಯೋಗವು ಏಪ್ರಿಲ್ 91ರ ಕೊನೆಯ ವಾರದಲ್ಲಿ ಭೇಟಿ ಮಾಡುವ ಕಾರ್ಯಕ್ರಮವಿದೆ.

ಇ) ಇಲ್ಲ

ಈ) ರೂ. 382.76 ಲಕ್ಷಗಳ ಅಂದಾಜು.

ಉ) ಈ ಸಂಸ್ಥೆಯು ರಾಜ್ಯದ ಹಾಗೂ ಇಡೀ ರಾಷ್ಟ್ರದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ತರಭೇತಿ ನೀಡುತ್ತದೆ. ಮತ್ತು ರೈತರಿಗೆ ಜಲಾನಯನ ಅಭಿವೃದ್ಧಿ, ಒಣಭೂಮಿ ತಾಂತ್ರಿಕತೆಯ ಮೇಲೂ ತರಬೇತಿ ನೀಡುತ್ತದೆ. ಇದರಿಂದ ಬೀದರ್ ಜಿಲ್ಲೆಗೂ ಸಹ ಅನುಕೂಲವಾಗುತ್ತದೆ.

ರಾಜ್ಯದ ಸ್ವೈಫಂಡರಿ ನೌಕರರಿಗೆ ಕೆಲಸ ಖಾಯಂ ಮಾಡುವುದು

(1573) - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ರಾಜ್ಯದ ಸ್ವೈಫಂಡರಿ ನೌಕರರಿಗೆ ಕೆಲಸ ಖಾಯಂ ಮಾಡುವುದಾಗಿ ಭರವಸೆ ನೀಡಿಸಲಿಲ್ಲವೇ?

ಆ) ಈಗಿನ ಸರ್ಕಾರ ಅಧಿಕಾರ ವಹಿಸಿಕೊಂಡ ಮೇಲೆ ಎಷ್ಟು ಜನರಿಗೆ ಕೆಲಸ ಖಾಯಂ ಮಾಡಲಾಗಿದೆ?

ಇ) ಕೆಲಸ ಖಾಯಂ ಮಾಡುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):